ಪಾರ್ಟಿ ಮಾಡಿಕೊಂಡಿರುವುದು ನಿಮ್ಮ ಗಮನಕ್ಕೆ ಬಂದಿದ್ದರೂ ಎಷ್ಟು ಜನಗಳ ಮೇಲೆ ಶಾಸನ ಪ್ರಕಾರ ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಕೆ. ಪುಟ್ಟಸ್ವಾಮಿ.—ಅದಕ್ಕೆ ಈಗಾಗಲೇ ಉತ್ತರ ಹೇಳಿದ್ದೇನೆ. ಅಂಥಾದ್ದು ಯಾವುದೂ ಸರ್ಕಾರದ ಗಮನಕ್ಕೆ ಬಂದಿಲ್ಲ. ರಿಜಿಸ್ಟರ್ ಮಾಡಿಸಿಕೊಳ್ಳಬೇಕಾದರೆ, ಶುಲ್ಕವೇನೂ ಕೊಡಬೇಕಾಗಿಲ್ಲ. ಶುಲ್ಕ ಯಾರಾದರೂ ಅಲ್ಲಿ ವಸೂಲುಮಾಡುತ್ತಾರೆಂಬುದನ್ನು ನನಗೆ ತಿಳಿಸಿದರೆ, ಅದಕ್ಕೆ ಸಂಬಂಧಪಟ್ಟವರ ಮೇಲೆ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

Lotteries in the State

815. Sri K. H. SRINIVAS (Sagar).—

Will the Minister for Finance, Planning and Youth Welfare be pleased to state :—

(*a*) the Law under which the holding of Lotteries is prohibited in the State ;

(*b*) whether the Law will be amended for enabling the State Government to hold the Lotteries ;

(*c*) whether Government are also considering proposals to give permission to private organisations to raise money through lotteries exclusively for charitable purposes and for setting up educational institutions ?

Sri RAMAKRISHNA HEGDE (Minister for Finance, Planning and Youth Welfare).—

(*a*) There is no law prohibiting State Lotteries.

(*b*) Does not arise.

(*c*) No.

ಶ್ರೀ ಕೆ. ಎಚ್. ಶ್ರೀನಿವಾಸ.—(೫) ಪ್ರಶ್ನೆಗೆ ಉತ್ತರವಾಗಿ 'ಇಲ್ಲ' ಎಂದು ಹೇಳಿದ್ದೀರಿ. ಈಗಾಗಲೇ ಅನೇಕ ರಾಜ್ಯಗಳಲ್ಲಿ ಲಾಟರಿ ನಡೆಸುತ್ತಿರುವುದರಿಂದ ಆ ಟಿಕೆಟ್‌ಗಳು ಭಾರಿ ಪ್ರಮಾಣದಲ್ಲಿ ನಮ್ಮ ರಾಜ್ಯದಲ್ಲಿ ಖರ್ಚಾಗುತ್ತಿವೆ. ಆದ್ದರಿಂದ ನಮ್ಮ ರಾಜ್ಯದಲ್ಲಿಯೂ ಲಾಟರಿ ನಡೆಸುವ ಆಲೋಚನೆಯಲ್ಲಿ ಸರ್ಕಾರ ಇದೆಯೆಂದು ತಿಳಿದುಬಂದಿದೆ. ಆದ್ದರಿಂದ ಖಾಸಗಿ ಸಂಘ ಸಂಸ್ಥೆಗಳಿಗೆ ಸಾಧ್ಯವಾದಷ್ಟುಮಟ್ಟಿಗೆ ಈ ವಿಚಾರದಲ್ಲಿ ಅನುಮತಿ ಕೊಡುವ ಬಗ್ಗೆ ಏಕೆ ಸರ್ಕಾರದವರು ಪರಿಶೀಲನೆ ಮಾಡಬಾರದು ?

†ಶ್ರೀ ರಾಮಕೃಷ್ಣ ಹೆಗಡೆ.—ಸರ್ಕಾರದವರೇ ಲಾಟರಿ ನಡೆಸಬೇಕೆಂಬ ವಿಚಾರ ಈಗ ಇರುವುದರಿಂದ ಖಾಸಗೀ ಸಂಸ್ಥೆಗಳಿಗೆ ಅನುಮತಿ ಕೊಡಬೇಕೆಂದೇ ಕನ್‌ಫ್ಯೂಷನ್ ಆಗುತ್ತದೆ. ಅದು ಸರಿಯಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ.—ಬೇರೆ ರಾಜ್ಯದ ಲಾಟರಿ ಟಿಕೆಟ್‌ಗಳನ್ನು ಈ ರಾಜ್ಯದಲ್ಲಿ ಮಾರುವುದರಿಂದ ನಮ್ಮ ರಾಜ್ಯದ ಲಾಟರಿಗೆ ಧಕ್ಕೆಯಾಗುತ್ತದೆಂದು ಅದನ್ನು ಈಗಲೇ ಬಹಿಷ್ಕರಿಸುವ ಯೋಚನೆಯನ್ನು ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಅದನ್ನು ಸರ್ಕಾರದವರು ಯೋಚನೆಮಾಡುತ್ತಿದ್ದಾರೆ. ಈಗಿರುವ ಕಾಯಿದೆ ಪ್ರಕಾರ ಬೇರೆ ರಾಜ್ಯದಲ್ಲಿ ಲಾಟರಿ ನಡೆಸುತ್ತಿದ್ದಾರೆ. ಅದರ ಮಾರಾಟ ತಡೆಗಟ್ಟುವುದಕ್ಕೆ ನಮಗೆ ಹಕ್ಕು ಇಲ್ಲ. ಮದ್ರಾಸ್ ರಾಜ್ಯದಲ್ಲಿಯೂ ಇದರ ಬಗ್ಗೆ ಯಾವ ಪ್ರತಿಬಂಧಕ ಕಾನೂನು ಇಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಗಾಂಧಿ ಶತಾಬ್ದಿ ವರ್ಷದಲ್ಲಿ ಕಾನೂನು ಪ್ರಕಾರ ರಾಟರಿ ನಡೆಸುವುದನ್ನು ಪ್ರಾರಂಭ ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಗಾಂಧಿ ಶತಮಾನೋತ್ಸವಕ್ಕೂ ಇದಕ್ಕೂ ಯಾವ ತರಹ ಸಂಬಂಧವನ್ನು ಮಾನ್ಯ ಸದಸ್ಯರು ಕಲ್ಪಿಸುತ್ತಾರೋ ನನಗೆ ಗೊತ್ತಿಲ್ಲ.

ಶ್ರೀ ಅಜೀಜ್ ಸೇಟ್.—ನೀವು ಎಷ್ಟು ತೆಗೆದುಕೊಂಡಿದ್ದೀರಿ ?

ಶ್ರೀ ರಾಮಕೃಷ್ಣ ಹೆಗಡೆ. —ಕೆಲವರು ತೆಗೆದುಕೊಂಡಿರಬಹುದು. ಕೆಲವರಿಗೆ ಬಹುಮಾನವೂ ಸಿಕ್ಕಿದೆ. ನಾನು ಮೊದಲೇ ಹೇಳಿದ ಹಾಗೆ ನಮ್ಮ ರಾಜ್ಯದಲ್ಲಿ ಈ ಕಾರ್ಯಕ್ರಮವನ್ನು ನೂಕ್ತವಾದ ಸಮಯದಲ್ಲಿ ಪ್ರಾರಂಭಿಸುತ್ತೇವೆ.

ಶ್ರೀ ಕೆ. ಎಚ್. ಪಾಟೀಲ್.—ರಾಜ್ಯದಲ್ಲಿ ರಾಟರಿಗಳನ್ನು ನಡೆಸುವುದನ್ನು ಯಾವ ಕಾನೂನಿನ ಮೇರೆಗೆ ನಿಷೇಧಿಸಲಾಗಿದೆ ಎಂದು ಕೇಳಿದ ಪ್ರಶ್ನೆಗೆ, ರಾಜ್ಯದ ರಾಟರಿಗಳನ್ನು ನಿಷೇಧಿಸುವ ಕಾನೂನು ಯಾವುದೂ ಇಲ್ಲ ಎಂದು ಹೇಳಿದ್ದೀರಿ. ಶ್ರೀನಿವಾಸರವರು ಕೇಳಿದ್ದು ರಾಜ್ಯದಲ್ಲಿ ರಾಟರಿ ಗಳನ್ನು ಪ್ರತಿಬಂಧಕ ಮಾಡುವ ಯಾವುದಾದರೂ ಕಾಯಿದೆ ಇದೆಯೇ ಎಂದು. ಹಾಗಿಲ್ಲದಿದ್ದರೆ, ಖಾಸಗೀ ಸಂಸ್ಥೆಗಳು ಇದನ್ನು ಮಾಡುವುದಕ್ಕೆ ಕಾಯಿದೆ ಪ್ರಕಾರ ಆಗುತ್ತದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಖಾಸಗೀ ಸಂಸ್ಥೆಗಳು ರಾಟರಿಗಳನ್ನಾಗಲಿ, ರ್ಯಾಫಲನ್ನಾಗಲ ಮಾಡಬೇಕಾದರೆ, ಸರ್ಕಾರದ ಅನುಮತಿ ತೆಗೆದುಕೊಂಡು ಮಾಡಬೇಕಾಗುತ್ತದೆ. ಸರ್ಕಾರ ನಡೆಸುವುದಕ್ಕೆ ಯಾವ ಕಾಯಿದೆಯೂ ಇಲ್ಲ. ಯಾವುದೇ ರಾಟರಿಯನ್ನು ಸರ್ಕಾರ ಮಾಡಬೇಕಾ ದರೂ, ಅದು ಕೇಂದ್ರ ಸರ್ಕಾರದ ಅನುಮತಿ ಪಡೆಯಬೇಕು. ಮೈಸೂರು ರಾಜ್ಯದವರು ಈಗಾಗಲೇ ಅದನ್ನು ಪಡೆದಿದ್ದಾರೆ. ನಾನು ಉತ್ತರ ಕೊಟ್ಟಿದ್ದರಲ್ಲಿ ಯಾವುದೂ ವಿರೋಧ ಅಭಿಪ್ರಾಯವಿಲ್ಲ.

ಶ್ರೀ ಎಸ್. ಶಿವಪ್ಪ —ರಾಜ್ಯದಲ್ಲಿ ಖೋಟಾ ನೋಟು ತಯಾರು ಮಾಡತಕ್ಕಂತವರು ಈ ರಾಟರಿಯಲ್ಲೂ ಖೋಟಾ ರಾಟರಿ ಟಿಕೆಟ್ ಮಾಡಲು, ಸರ್ಕಾರವನ್ನು ಮೇಲಿಂದ ಮೇಲೆ ಇದರ ಬಗ್ಗೆ ಒತ್ತಾಯ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಅಂಥದೇನೂ ಗಮನಕ್ಕೆ ಬಂದಿಲ್ಲ. ಮಾನ್ಯ ಸದಸ್ಯರು ಹೇಳು ವಂತಹ ಖೋಟಾ ನೋಟು ತಯಾರು ಮಾಡುವವರು ಮೈಸೂರು ರಾಜ್ಯದಲ್ಲಿದ್ದಾರೆ ಎಂದು ಹೇಳಿದಾಗ, ಅದು ಮೈಸೂರು ಜನತೆಯ ಮೇಲೆ ಒಂದು ಕಳಂಕವನ್ನು ತಂದಹಾಗೆ ಆಗುತ್ತದೆ.

ಶ್ರೀ ಎಸ್. ಶಿವಪ್ಪ.—ನಾನು ಇಂಥವರೇ, ಅಂಥವರೇ ಎಂದು ಹೇಳಿದ್ದಲ್ಲ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದು.

ಶ್ರೀ ಎಸ್. ಬಂಗಾರಪ್ಪ.—ಈಗಾಗಲೇ ಸರ್ಕಾರದವರು ರಾಟರಿಯನ್ನು ಜಾರಿಗೆ ತರಬೇಕೆಂದು ತೀರ್ಮಾನ ಮಾಡಿದ್ದಾರೆ. ಹಾಗಿದ್ದರೆ, ಯಾವಾಗ ಜಾರಿಗೆ ತರುತ್ತೀರಿ ? ಒಂದುವೇಳೆ ಜಾರಿಗೆ ತರುವುದಾದರೆ, ಬಡವರೂ ತೆಗೆದುಕೊಳ್ಳಲು ಅನುಕೂಲವಾಗುವ ಹಾಗೆ ಅದರ ಬೆಲೆಯನ್ನು 8 ಆಣೆ, ಅಥವಾ ನಾಲ್ಕಾಣೆಗೆ ಇಳಿಸುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ರಾಟರಿ ವಿಚಾರದಲ್ಲಿ ಸರ್ಕಾರ ಇನ್ನೂ ಅಂತಿಮ ನಿರ್ಧಾರ ಮಾಡಿಲ್ಲ. ಮಾಡಬೇಕೆಂಬ ಯೋಚನೆ ಇದೆ. ಮಾಡಬೇಕೆಂದು ತೀರ್ಮಾನ ಮಾಡತಕ್ಕ ಕಾಲದಲ್ಲಿ ಈ ಎರಡ್ಮೂ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕು. ಅದರಿಂದ ಉತ್ಪನ್ನ ಹೆಚ್ಚು ಆಗಬೇಕು, ಬಡಬಗ್ಗರಿಗೂ ಅನುಕೂಲವಾಗಬೇಕು. ಬೇರೆ ರಾಜ್ಯಕ್ಕಿಂತಲೂ ಹೆಚ್ಚು ಆಕರ್ಷಕ ವಾಗಿರಬೇಕು.

ಶ್ರೀ ಕೆ. ನಂಗಣಗೌಡ.—ಇತರ ರಾಜ್ಯಗಳ ರಾಟರಿ ಟಿಕೆಟುಗಳು ನಮ್ಮ ರಾಜ್ಯದಲ್ಲಿ ಪ್ರತಿ ವರ್ಷ ಖರ್ಚಾಗುತ್ತವೆ. ಇದರಿಂದ ಎಷ್ಟು ಹಣ ಹೊರಗಡೆ ಹೋಗುತ್ತದೆ ಮತ್ತು ನಮ್ಮ ರಾಜ್ಯ ದವರು ಇದನ್ನು ಪ್ರಾರಂಭ ಮಾಡಿದರೆ, ಎಷ್ಟು ಹಣ ನಮಗೆ ಇದರಿಂದ ಬರಬಹುದು ?

ಶ್ರೀ ರಾಮಕೃಷ್ಣ ಹೆಗಡೆ.—ಅದನ್ನು ಅಂದಾಜು ಮಾಡುವುದಕ್ಕೆ ಸಾಧ್ಯವಿಲ್ಲ.